(ಶ್ರೀ ಹಂಜಿ ಶಿವಣ್ಣ)

ಅವನು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಈಗ ಡೈರಕ್ಟರಿಗೆ ಬೇಕಾದ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಯಾರು ಡೈರಕ್ಟರವರ ಸೇವೆಯನ್ನು ಮಾಡಿಕೊಂಡು ಹೋಗುತ್ತಾರೆ ಅವರಿಗೆ ಅನುಕೂಲವಾಗುತ್ತದೆ. ಸರಿಯಾಗಿ ಕಷ್ಟಪಟ್ಟು ಕೆಲಸಮಾಡುವವರು ತಲೆ ಎತ್ತುವುದಕ್ಕಾಗುವುದಿಲ್ಲ. ಈ ರೀತಿ ಆದರೆ ಇದನ್ನು ಸ್ಥಾಪನೆ ಮಾಡಿದಂಥ ನಮ್ಮ ಭಾರತರತ್ನರಾದಂಥ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿಗೆ ಒಂದು ಕಳಂಕವನ್ನು ತಂದಂತಾಗುತ್ತದೆ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಾನ್ಯ ನಿಜಲಿಂಗಪ್ಪನವರು ಮೈಸೂರು ರಾಜ್ಯದಲ್ಲಿ ಒಂದು ಬೀಜವನ್ನು ಬಿತ್ತಿದ್ದಾರೆ. ಆ ಬೀಜದ ಮಾರ್ಗವೇ ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಬರುತ್ತದೆ ಎಂದು ಹೇಳಿದ್ದಾರೆ. ಈ ಒಂದು ಜಾತಿಯ ಮೂಲಬೀಜವನ್ನು ಬಿತ್ತಿರುವುದರಿಂದ ಶ್ರೀಮಾನ್ ವೀರೇಂದ್ರ ಪಾಟೀಲರು ದಕ್ಷವಂತರಾಗಿದ್ದಾರೆ. ಆದುದರಿಂದ ಅದನ್ನು ನಿರ್ಮೂಲ ಮಾಡಬೇಕು ಎಂದು ಹೇಳುತ್ತೇನೆ. ಅವರು ನೀತಿಯುತವಾಗಿ ಕೆಲಸ ಮಾಡಿದರೆ ಹೆಚ್ಚಿನ ಪ್ರಯೋಜನ ಬರುತ್ತದೆ ಎಂದು ನಾನು ಹೇಳುತ್ತೇನೆ. ಮೊನ್ನೆತಾನೆ ಉಜ್ಜಯನಿಯಲ್ಲಿ ನಡೆದಂಥ ಗಲಾಟೆ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಅದಕ್ಕೆ ಉತ್ತರ ಹೇಳಿದ್ದಾರೆ. ಅದು ಗುಪ್ತ ರೀತಿಯಲ್ಲಿ ಘರ್ಷಣೆ ನಡೆದಿದೆ. ಈ ವಿಷಯದಲ್ಲಿ ಅವರು ನೀತಿವಂತರಾಗಿದ್ದರೆ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡಿ ಇದನ್ನು ನಿರ್ಮೂಲ ಮಾಡಬೇಕು ಎಂದು ಹೇಳುತ್ತೇನೆ. ಮಾಡದಿದ್ದರೆ ನಿಜವಾಗಿಯೂ ಈ ಒಂದು ಪರಿಣಾಮ ಅಗಾಧವಾಗಿ ಆಗಬಹುದು ಎಂದು ತಿಳಿಸುತ್ತೇನೆ. ಮೊನ್ನೆ ಈ ಘಟನೆ ನಡೆದಾಗ ನಾನೂ ಅಲ್ಲಿ ಇದ್ದೆ. ಈ ಗಲಾಟೆಯಿಂದ ಅಲ್ಲಿ 2-3 ಸಾವಿರ ಜನಕ್ಕೆ ಅನಾಹುತವಾಗುತ್ತಿತ್ತು ಎಂದು ಹೇಳುತ್ತೇನೆ. ಅದನ್ನು ಒಪ್ಪುವುದಕ್ಕೆ ಕಾರಣವೂ ಇದೆ. ಇದೇತರಹ ನಡೆದರೆ ಇದು ಒಳ್ಳೆಯ ರೂಪದಲ್ಲಿರುವುದು ಹೋಗಿ ಕೊನೆಗೆ ಯಾವುದೋ ಒಂದು ಘಟ್ಟಕ್ಕೆ ಬಂದು ಮುಟ್ಟಬೇಕಾಗುತ್ತದೆ.

ಯಾರೂ ಕೂಡ ಹೇಡಿಗಳು ಎಂದು ಇಲ್ಲಿ ನಾನು ಹೇಳಲು ಇಷ್ಟಪಡುವುದಿಲ್ಲ. ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಕೆಲಸ ಮಾಡಲು ಪ್ರಯತ್ನ ಮಾಡುತ್ತಾರೆಂದು ನಾನು ಆಶಪಡುತ್ತೇನೆ. ನಾನು ಕೊಟ್ಟಿರುವ ಸೂಚನೆಗಳನ್ನು ಸರಕಾರದವರು ಗಮನಕ್ಕೆ ತಗೆದುಕೊಂಡು ಈ ದೇಶದಲ್ಲಿ ಜಾತೀಯತೆಯನ್ನು ನಿರ್ಮೂಲ ಮಾಡುವುದರಲ್ಲಿ ನಮ್ಮ ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಾರೆ ಎಂದು ಹೇಳಿ ನನಗೆ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Statement of Chief Minister *re*: irrigation projects under Cauvery

Mr. SPEAKER.—The Hon. Chief Minister may now make the statement.

Sri VEERENDRA PATIL (Chief Minister).—I am fully aware that the minds of Hon'ble members of the House and of the people of the entire State of Mysore are agitated over the news appearing in today's papers stating that the Central Government has sought from the State Government an undertaking that it would not proceed with the Hemavathi, Harangi and Kabini projects in Mysore State, and also not to take up any fresh schemes not approved by the Planning Commission.

The first communication received in this connection from the Government of India was in September 1969. In this communication, the Government of India indicated thatr Pess reports have appeared to the effect that the Government of Mysore would not await clearance

from the Centre for any new projects in the Cauvery basin, but that they would go ahead with the construction of these without such clearance. The Government of India further indicated that the Governments of Tamil Nadu and Kerala have represented that the Centre should intervene in the matter and get agreed decisions before the above projects are actually undertaken by the Government of Mysore. It was suggested that a meeting with the Chief Ministers of Mysore, Tamil Nadu and Kerala may be held in New Delhi or any other suitable place in the near future, as far as the Kabini project is concerned. It was also suggested that a meeting of the Chief Ministers of Tamil Nadu and Mysore may be held separately to discuss the Hemavathi and other projects for which there are differences of opinion between the two Governments.

For various reasons, the proposed meeting could not immediately take place, It was suggested by me to the Government of India that the proposed meeting of Chief Ministers may be proceeded by a meeting of the officers of the various States concerned Finally an official level meeting was held at New Delhi under the Chairmanship of the Secretary to the Government of India, Ministry of Irrigation and Power on 27th and 28th January 1970 in which the Secretaries to the Government of Mysore, Tamilnad and Kerala participated.

The official level meeting was followed by the Ministers level meeting on the 9th February 1970 under the Chairmanship of the Union Minister for Irrigation and Power in which the Ministers of Mysore and Tamiland participated. No Ministers from Kerala could attend, but the Secretaries to the Government of Kerala of their Irrigation and Power Department. and of the Public Worke Department were present. The meeting which was originally planned for being held at Chief Ministers' level could not materialise due to the fact that on the date fixed for the meeting *i.e.*, on 9th February 1970, the Chief Minister of Kerala was indisposed and even the concerned Minister of Kerala would not attend due to pre-occupation. I was also indisposed and was under medical advice not to travel to New Delhi. The Chief Minister of Tamiland also did not attend the meeting, but two of their Ministers attended.

On behalf of Mysore, Sri K. Puttaswamy, Minister for Law and Parliamentary Affairs attended the meeting. There was a general discussion about various matters relating to Cauvery Waters. It was decided that the Government of India would forward proposals for further action to be taken on the Hemavathi, Harangi and Kabini projects to the State Governments for their consideration. These proposals were accordingly sent to Mysore State also on 11th February 1970 and they are under active consideration. No reply on these proposals has so far been given to the Government of India.

One of the proposals made was that the construction of "new projects" (*i.e.*, projects not yet approved by Planning Commission) should not be taken up or proceeded without the clearance of the Planning Commission by any of the States concerned.

(SRI VEERENDRA PATIL)

In his latest letter of 26th February 1970, the Government of India have brought to our notice that the Chief Minister of Tamil Nadu has requested the Government of India that as the Government of Mysore have not given any assurance that work of the new projects namely Hemavathi, Harangi and modified Kabini scheme will not be proceeded with till the Inter-State aspects are settled, the matter may be referred expeditiously to a Tribunal under the Inter-State Water Dispute Act for adjudication. The Government of India have stated that they feel that a settlement by negotiations would be preferable and may still be possible and have suggested that work on these new projects (*i.e.*, projects which are yet to be cleared by the Planning Commission) may not be proceeded with until they are cleared by the Planning Commission. The Government of India have requested the State Government for a confirmation of the procedure outlined above, so that the possibilities of further negotiations to settle the Inter-State differences, can be considered. They have hoped that a reply would be available within a week or so. They have been replied that the matter is under the active consideration of the Government of Mysore and that a reply will be given in 3 or 4 weeks' time.

Sri H. SIDDAVEERAPPA.—Sir, we have heard with rapt attention the statement by the Hon. Chief Minister. It is very unfortunate and tragic in the extreme that the State of Mysore is subjected of this agony. If you see from the beginning, there is one thing that is noticeable. We seem to be losing our case if we do not alert ourselves in time and move as fast as others do, if not faster. I do not refer to the other burning issues today. With regard to this water issue what does the Central Government mean by saying no State should take up works that are to be implemented in these areas unless and until a decision is arrived at for the simple reason that the State of Madras has no work on hand. Every available gallon of water that flows to the sea has been utilised by them. It is only the State of Mysore that is suffering. Works are in progress only in the State of Mysore. Sir, I feel that the Government of Mysore should have strong sinews, strong nerves to proceed with this matter. Unfortunately. I do not know the strategy of the Chief Minister of Mysore. He seems to be suffering from a kind of feeling that every thing must be allowed to drift. I am sorry to use that word, because, hitherto he was saying with regard to the border dispute, 'let me get the proposals and then let me go.' Here is a concrete proposal that is given on the water dispute. What prevents the Chief Minister to run up to Delhi immediately and put forth a valiant fight and tell them that this 'State should not be allowed to suffer like this.' It is this weak-kneed policy of this Mysore Government that is landing us into this abyss. Therefore even now, I plead with all the emphasis at my command—I do not wish to use any harsh language—that he should immediately proceed to Delhi. Why should he ask for two or three

weeks more ? Why should there be any further delay ? Therefore, I am making this appeal to him. He must immediately proceed to Delhi without any loss of time and press our case.

Mr. SPEAKER.—After the statement was made by the Hon. Chief Minister, I permitted Sri Siddaveerappa to peak under the impression that he is seeking some clarification. Now the hon. Member is making certain suggestions. In this connection I want to remind the hon. members that it is not a matter on which there is any scope under the rules for clarification. The statement should not become a matter for debate.

Sri H. SIDDAVEERAPPA.—We are not slaves to rules. Here is a problem which should not be controlled by any rules. I do not wish to say anything, because there is a feeling that works in the Cauvery basin have been halted, whereas the works in Krishna basin have been proceeding undisturbed.

Mr. SPEAKER.—We cannot get away from the Rules. If any clarification be asked it must be done within a minute or two but there is no room for speech-making.

† Sri H. M. CHANNABASAPPA (Periyapatna).—I have submitted a motion just now that the Statement of the Chief Minister on Cauvery waters be taken into consideration by this House. It is a matter for you to decide whether to admit it or not. In this context I would like to appeal to you that amongst the importanti nter-State matters, wherein the future of Mysore is at stake, Cauvery issue is one. We have already lost, and lost very heavily, on the Krishna side. We had lost, not because we have no good case. We have a good case, probably the best case possible, but by shree neglect of duty for various reasons, political or otherwise, we have lost our case. Now I do not want to go into those reasons. This question of Cauvery is pending for the last 9 to 10 years.

Mr. SPEAKER.—I have seen the member's notice. I shall consider about it. But now there is no scope for speech-making.

Sri H. M. CHANNABASAPPA.—Even setting aside all other rules, by exercise of the special authority vested in you. I appeal to you that since this is a burning question affecting the future of the State, you may please admit the motion sent by me that the statement of the Chief Minister on Cauvery waters be taken into consideration by this House. Tomorrow is a holiday, day after tomorrow also is a holiday and the day after it is Sunday. Thus there will be 3 or 4 holidays before the Assembly meets next. In the meantime what will happen, God only knows. So I request you to admit this motion and permit discussion on the statement of the Chief Minster. What is the use of permitting it, when everything is lost ?

Mr. SPEAKER.—I will consider the matter and give my ruling. In the meantime if the hon. Member wants to have any clarification he can ask, but there is no room for speech-making now.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಮಾತನಾಡುವ ಹುಚ್ಚು ಇಲ್ಲ. But the State's interest is supreme. The interest of the State is at stake now particularly in the old Mysore area in the Cauvery basin- ತಾವು ತಿಳಿದು ಕೊಂಡಿರುವುದು ನಮಗೆ ಇಲ್ಲಿ ಮಾತನಾಡುವ ಹುಚ್ಚು ಇದೆ ಎಂಬುದಾಗಿ. ಆ ರೀತಿ ತಮ್ಮ ಮನಸ್ಸಿನಲ್ಲಿ ಇದ್ದರೆ ಅದನ್ನು ತಮ್ಮ ತಲೆಯಿಂದ ತೆಗೆದುಬಿಡಿ.

Mr. SPEAKER.—If the member wants to ask any clarificaion, it should be asked within a minute or two. It cannot be converted into a speech.

Sri H. M. CHANNABASAPPA.—I know the difference between speech and clarification. I need not be told about it.

Mr. SPEAKER.—Then the member may proceed with his clarification.

† ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಪ್ರಶ್ನೆ ಇಷ್ಟೆ, ಯಾವ ಶಾಸನದ ಪ್ರಕಾರ ಯಾವ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರದ ಮಂತ್ರಿಗಳು ಕಾವೇರಿ ಬೇಸಿನ್‌ನಲ್ಲಿರುವ ಪ್ರಾಜೆಕ್ಟ್‌ಗಳನ್ನು ಯಾವುದನ್ನೂ ಕಟ್ಟಬಾರದು ಎಂಬ ಆದೇಶವನ್ನು ನಿಮಗೆ ಕೊಟ್ಟಿದ್ದಾರೆ. ಅವರು ಏನಾದರೂ ಕಾನ್ಸ್‌ಟ್ಯೂಷನ್‌ನ ಅಧಿಕಾರ ಚಲಾಯಿಸಿಯಾಗಲೀ, ಇಂಟರ್‌ಸ್ಟೇಟ್ ರಿವರ್ ವಾಟರ್ ಡಿಸ್‌ಪ್ಯೂಟ್ ಆಕ್ಟ್‌ನ ಅಧಿಕಾರವನ್ನು ಉಪಯೋಗಿಸಿಯಾಗಲೆ, ಮೈಸೂರು ಮತ್ತು ಮದ್ರಾಸ್ ರಾಜ್ಯಗಳ ಮಧ್ಯೆ ಆಗಿರುವ ಅಗ್ರಿಮೆಂಟ್ ಪ್ರಕಾರವಾಗಲೀ ಕಾಗದ ಬರೆಯಲು ಅವರಿಗೆ ಅಧಿಕಾರ ಇದೆಯೇ? ಇಲ್ಲದೇ ಹೋದರೆ ಅವರು ಏತಕ್ಕೋಸ್ಕರ ಯಾವ ಅಧಿಕಾರವನ್ನು ಚಲಾಯಿಸಿ ತಮಗೆ ಕಾಗದ ಬರೆದಿದ್ದಾರೆ? ಅವರ ಪತ್ರಕ್ಕೆ ನೀವು ಉತ್ತರ ಕೊಡುವುದರಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವ ಅಧಿಕಾರ ಇದೆ ಎಂದು ತಾವು ಒಪ್ಪಿಕೊಂಡಂತೆ ಆಗುವುದಿಲ್ಲವೆ? ಮೂರನೆಯದಾಗಿ ಕೇರಳಾದವರು ಈ ಅಗ್ರಿಮೆಂಟ್ ನಮಗೆ ನ್ಯಾಯವಾಗಿಲ್ಲ, ನಾವು ಇದಕ್ಕೆ ಪಾರ್ಟಿಯಾಗಿದ್ದೇವೆ, ಆದ್ದರಿಂದ ಈ ಅಗ್ರಿಮೆಂಟನ್ನು ರದ್ದು ಮಾಡಿ ಮತ್ತೆ ರೀಕನ್ಸಿಡರ್ ಮಾಡ ಬೇಕು ಎಂಬುದಾಗಿ ಒಂದು ಪಾಯಿಂಟನ್ನು ರೈಸ್ ಮಾಡಿದ್ದಾರೆಯೇ? ನಾಲ್ಕನೆಯದಾಗಿ ಕಬಿನಿ ನದಿಯಲ್ಲಿ ನಾವು 60 ಪರ್‌ಸೆಂಟ್ ನೀರನ್ನು ಉಪಯೋಗಿಸಿಕೊಂಡಮೇಲೆ. ಅಮರಾವತಿ ಮತ್ತು ಭವಾನಿ ಯೋಜನೆಗಳಿಂದ 2 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿಕೊಂಡಮೇಲೆ, ಕಬಿನಿ ಪ್ರಾಜೆಕ್ಟ್‌ನ ಪಾಯಿಂಟ್ ಮೇಲಿನಿಂದ ಇನ್ನೂ ಎಷ್ಟು ನೀರು ಉಳಿಯುವುದಕ್ಕೆ ಸಾಧ್ಯ ಇದೆ; ಐದನೆಯದಾಗಿ ಮೈಸೂರು ಸರ್ಕಾರದವರು ಕೇರಳಾ ಸರ್ಕಾರದ ಜೊತೆ ಯಲ್ಲಿ ಈ ಬಗ್ಗೆ ಏನಾದರು ಚರ್ಚೆ ಮಾಡಿದ್ದಲ್ಲಿ ಅದರ ಪ್ರತಿಫಲ ಏನು? ಅಥವಾ ಈ ಸಂಬಂಧದಲ್ಲಿ ಕೇರಳಾ ಸರ್ಕಾರಕ್ಕೂ ನಮ್ಮ ಸರ್ಕಾರಕ್ಕೂ ಘರ್ಷಣೆ ಏನಾದರೂ ಉಂಟೋ?

ಕೇರಳದವರು ಕೇಳತಕ್ಕಂಥ ನೀರು ಎಷ್ಟು? ಮತ್ತು ಅದನ್ನು ಕನ್‌ಸಿಡರ್ ಮಾಡುವುದಕ್ಕೆ ನಮಗೆ ಏನಾದರೂ ಅಭ್ಯಂತರ ಇದೆಯೇ? ಮತ್ತು ಈಗ 1959ನೇ ಇಸವಿಯಲ್ಲಿ ಈ 1924ನೇ ಇಸವಿಯಲ್ಲಿರ್ಯಾದ ಅಗ್ರಿಮೆಂಟ್ ಏನಿದೆ ಅದು ಅಗ್ರಿಮೆಂಟಲ್ಲ. ಆ ಅಗ್ರಿಮೆಂಟ್ ನ್ಯಾಯಬದ್ಧವಾಗಿಲ್ಲ ಎಂದು ನಾವು ಸ್ವಾಭಿಮಾನದಿಂದ ತಿಳಿದುಕೊಂಡಿದ್ದೇವೆ. 1959ನೇ ಇಸವಿಯಿಂದ ಈಚೆಗೆ ಇಲ್ಲಿಯವರೆಗೂ ಮೈಸೂರು ಸರ್ಕಾರದವರು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನೇನಾದರೂ ಬರೆದಿದ್ದಾರೆಯೇ, ಬರೆದಿದ್ದರೆ ಯಾವಾಗ ಏನು ಬರೆದಿದ್ದೀರಿ? ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರದವರ ಆದೇಶಕ್ಕೆ ಒಪ್ಪಿ ಹೇಮಾವತಿ, ಹಾರಂಗಿ ಮತ್ತು ಕಂಬದ ಕಡ, ಕಪಿನಿ ಇತ್ಯಾದಿ ಯೋಜನೆಗಳನ್ನು ನಿಲ್ಲಿಸಬೇಕು ಎಂದು ನಿಮ್ಮ ಮನಸ್ಸಿನಲ್ಲಿ ಇದೆಯೇ?

ಶ್ರೀ ಎಸ್. ಶಿವಪ್ಪ.—ಕೃಷ್ಣಾ ನದಿಯ ಕಣಿವೆಯ ಯೋಜನೆಗಳ ಬಗ್ಗೆ ಇಷ್ಟೊಂದು ಪ್ರತಿ ಭಟನೆಯನ್ನು ಸೂಚಿಸಿದರೂ ಕೂಡ ಅದಕ್ಕೆ ಅವಕಾಶವನ್ನು ಕೊಡದೆ ನಾಗಾರ್ಜುನ ಸಾಗರಕ್ಕೆ ನೀರು ಪೂರೈಕೆ ಆಗುವ ತನಕ ಕೇಂದ್ರ ಸರ್ಕಾರದವರು ಸುಮ್ಮನೆ ಇದ್ದು ಆಮೇಲೆ ಟ್ರಿಬ್ಯುನಲ್ ಏರ್ಪಾಡು ಮಾಡಿದರು. ಅದೇ ಸಲಭ್ಯವನ್ನು ಹೇಮಾವತಿ ಕಟ್ಟೆಯನ್ನು ಕಟ್ಟತಕ್ಕ ಕಾಲದಲ್ಲಿಯೂ ಕೊಡಲಿ. ಇದು ಮುಗಿದಮೇಲೆ ಟ್ರಿಬ್ಯುನಲ್ ನೇಮಕ ಮಾಡುವುದಕ್ಕೆ ಅವಕಾಶವನ್ನು ಕೊಡಲಿ. ಕರ್ನಾಟಕಕ್ಕೆ ಏತಕ್ಕೆ ಪಕ್ಷಪಾತ ಮಾಡಿದರು ಎನ್ನುವುದು ಒಂದು ಪ್ರಶ್ನೆ.

ಎರಡನೆಯದು ಹೇಮಾವತಿ ಮತ್ತು ಕಪಿನಿ ಪ್ರಾಜೆಕ್ಟ್‌ಗಳನ್ನು ಕಟ್ಟಕೂಡದೆಂದು ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಸೂಚನೆ ಬಂದಿರುವುದು ತುಂಬಾ ಅನ್ಯಾಯ. ಮದ್ರಾಸಿನಲ್ಲಿರ

ತಕ್ಕ ಡಿ. ಎಂ. ಕೆ. ಸರ್ಕಾರದ ನಾಯಕರಾದ ಶ್ರೀ ಕರುಣಾನಿಧಿಯವರು ಕೇಂದ್ರ ಸರ್ಕಾರದಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದರಿಂದ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರು ನಮ್ಮ ಹೇಮಾವತಿ, ಕಪಿನಿ, ಹಾರಂಗಿ ಇತ್ಯಾದಿ ಪ್ರಾಜೆಕ್ಟ್‌ಗಳನ್ನು ನಿಲ್ಲಿಸಬೇಕೆಂದು ನಮ್ಮ ಸರ್ಕಾರಕ್ಕೆ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಇದು ಅನ್ಯಾಯ. ನಾಗಾರ್ಜುನಾ ಸಾಗರದ ಪ್ರಾಜೆಕ್ಟ್‌ನು ಕಟ್ಟಿಸಿದ ಮೇಲೆ ಶ್ರೀಮಾನ್ ಕೆ. ಎಲ್. ರಾವ್ ಅವರಿಂದ ಈ ಸೂಚನೆ ಬಂದಿದೆ. ಆದ್ದರಿಂದ ಶ್ರೀ ಕೆ. ಎಲ್. ರಾವ್ ಅವರು ಮೈಸೂರು ರಾಜ್ಯದಮೇಲೆ ಎಲ್ಲಿಯವರೆಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಾರೆಯೋ ಅಲ್ಲಿಯವರೆಗೂ ನಮಗೆ ರಕ್ಷಣೆ ದೊರೆಯುವುದಿಲ್ಲ. ಇತ್ತೀಚೆಗೆ ಡಿ. ಎಂ. ಕೆ. ಸರ್ಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಆಗಿರುವ ಮಹತ್ವ ಸಂಬಂಧ ಏನು.? ಇದಕ್ಕೆ ಮೈಸೂರಿನವರು ಪ್ರತಿಭಟನೆ ಸೂಚಿಸುತ್ತೇವೆ ಎಂದರೆ ಯಾರೂ ಬರುವುದಿಲ್ಲವೆ ?

Sri L. SRIKANTAIAH (Nanjangud).—I want to know from the Hon. Chief Minister whether the Centre was not aware that the Mysore Government was going ahead with the work of Kabini, Hemavathi and others. When the Hon. Minister Sri Puttaswamy was present in Delhi, was any hint given to the Government that shortly an order of injunction would be issued against the Mysore Government to stop all these constructions? Whatever it may be, will the Hon. Chief Minister give a positive assurance to this House that in spite of the order of restraint or injunction the Government of Mysore will go ahead with these works and will not care for the Centre so far as the interests of Mysore are concerned ?

ಶ್ರೀ ಎಂ. ನಾಗಪ್ಪ.—1924ನೇ ಇಸವಿಯಲ್ಲಿ ಆದಂತಹ ಅಗ್ರಿಮೆಂಟ್ ಇನ್ನೂ ಮೈಸೂರ್ ಸರ್ಕಾರದಲ್ಲಿ ಅಸ್ತಿತ್ವದಲ್ಲಿದೆಯೆಂದು ನೀವು ತಿಳಿದುಕೊಂಡಿದ್ದೀರಾ, ಅಥವಾ ಪೈಪ್ ಲೈಟ್ ಆಗಿದೆಯೆಂದು ಸರ್ಕಾರದವರು ಭಾವಿಸಿದ್ದೀರಾ? 1956ನೇ ಇಸವಿಯಲ್ಲಿ ಸ್ಟೇಟ್ ರೀ ಆರ್ಗನೈಜೇಷನ್ ಆದಮೇಲೆ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಕೆಲವು ಏರಿಯಾದಲ್ಲಿ ಈ ಅಗ್ರಿಮೆಂಟ್ ಅಸ್ತಿತ್ವದಲ್ಲಿ ಇಲ್ಲ ಎಂದು, ಇದರ ಬಗ್ಗೆ ಯಾವ ಒತ್ತಾಯವನ್ನೂ ಹಾಕುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರದವರು ಭಾವಿಸಿದ್ದಾರೆಯೇ?

ಎರಡನೆಯದಾಗಿ ವಾಟರ್ ಬೋರ್ಡ್ ಆಕ್ಟ್ ಪ್ರಕಾರವಾಗಲೀ, ಈ ಅಗ್ರಿಮೆಂಟ್ ಪ್ರಕಾರವಾಗಲೀ, ಅಥವಾ ಇನ್ನು ಯಾವುದಾದರೂ ನಿಯಮದ ಪ್ರಕಾರ ಈ ಪ್ರಾಜೆಕ್ಟ್‌ಗಳ ಕೆಲಸವನ್ನು ಮಾಡಕೂಡದು ಎಂದು ಹೇಳತಕ್ಕಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆಯೇ! ಕೇಂದ್ರ ಸರ್ಕಾರ ಈ ಕೆಲಸಗಳನ್ನು ಮಾಡಕೂಡದು ಎಂದು ಹೇಳಿ ಒಂದು ಪಕ್ಷಪಾತ ನೀತಿಯನ್ನು ತೋರಿಸುತ್ತದೆ ಎಂದು ಮೈಸೂರು ಸರ್ಕಾರ ಭಾವಿಸಿದೆಯೇ?

† ಶ್ರೀ ಎಚ್. ಎನ್. ನಂಜೇಗೌಡ.—ಇದು ಕಳವಳಕಾರಿ ಸಂಗತಿ. ಕೇಂದ್ರ ಸರ್ಕಾರದವರು ನಮ್ಮ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಾದ ಹೇಮಾವತಿ, ಹಾರಂಗಿ, ಕಂಬದ ಕಡಮತ್ತು ಕಪಿನಿ ಇತ್ಯಾದಿ ಪ್ರಾಜೆಕ್ಟ್‌ಗಳನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆಯೇ? ಆ ರೀತಿ ಹೇಳುವುದಕ್ಕೆ ಅವರಿಗೆ ಅಧಿಕಾರ ಇದೆಯೇ? ಏತಕ್ಕೆಂದರೆ ನಾಗಾರ್ಜುನ ಸಾಗರದ ಪ್ರಾಜೆಕ್ಟ್ ಸಂಬಂಧದಲ್ಲಿ, ಎಂದರೆ ಕೃಷ್ಣಾ ನೀರಿನ ಹಂಚಿಕೆಯ ವಿಷಯದಲ್ಲಿ ಟ್ರಿಬ್ಯುನಲ್‌ಗೆ ಹೋದರೂ ಕೂಡ ಆಂಧ್ರದವರು ನಾಗಾರ್ಜುನ ಸಾಗರಕ್ಕೆ ಕ್ರೆಸ್ಟ್ ಗೇಟನ್ನು ಹಾಕಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ನೀರಾವರಿ ಶಾಖೆಯ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರು ನಮ್ಮ ಮೈಸೂರು ರಾಜ್ಯದ ವಿಷಯದಲ್ಲಿ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ ಎನ್ನುವ ಅಭಿಪ್ರಾಯ ರಾಜ್ಯ ಸರ್ಕಾರಕ್ಕೆ ಬಂದಿದೆಯೇ? ಈಗ ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಈ ವಿಷಯದಲ್ಲಿ ಬಂದಿರತಕ್ಕ ಕಾಗದಕ್ಕೆ ತಾವು ಮನ್ನಣೆಯನ್ನು ಕೊಡುತ್ತೀರಾ? ಅಥವಾ ಕನದ ಬುಟ್ಟಿಗೆ ಎಸೆಯುತ್ತೀರಾ? ಪ್ರಾಮುಖ್ಯವಾಗಿ ಈ ಕಾಗದದಿಂದ ಜನತೆಯ ಮನಸ್ಸಿನಲ್ಲಿ ಗೊಂದಲವುಂಟಾಗಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಈಗ ಕಾವೇರಿ ಜಲಾನಯನದಲ್ಲಿ ನಡೆಯುತ್ತಿರುವ ಪ್ರಾಜೆಕ್ಟ್‌ಗಳ ಕೆಲಸವನ್ನು ನಿಲ್ಲಿಸಿ ಎಂದು ಹೇಳುತ್ತೀರಾ ಅಥವಾ ಕೆಲಸವನ್ನು ಮುಂದುವರಿಸಿ ಎಂದು ಹೇಳುತ್ತೀರಾ ?

† ಶ್ರೀ ಎಂ. ಎಸ್. ಕೃಷ್ಣನ್.—ಈಗ 1924ನೇ ಇಷಯಿಯ ಅಗ್ರಿಮೆಂಟ್ ವಿಷಯದಲ್ಲಿ ಒಂದು ನಿಲುವೆಯನ್ನು ತಾಳಿ, ಇದರ ಬಗ್ಗೆ ಚರ್ಚೆನಡೆದಾಗ ಈ ಅಗ್ರಿಮೆಂಟಿನಿಂದ ಮೈಸೂರು ರಾಜ್ಯಕ್ಕೆ ಮೋಸವಾಗಿದೆ, ಇದು ಸರಿಯಾಗಿಲ್ಲ ಎಂದು ಒಂದು ಅಭಿಪ್ರಾಯಕ್ಕೆ ಬಂದಿದ್ದೀರಿ ಎಂದು ಪದೇ ಪದೇ ಹೇಳುತ್ತಿದ್ದೀರಿ. ತಾವು ಅರ್ಲಿಯರ್ ಆಗಿ ಈ ಸ್ಟ್ಯಾಂಡನ್ನು ತೆಗೆದುಕೊಂಡಿದ್ದೀರಾ? ತಾವು ಈ ಸ್ಟ್ಯಾಂಡನ್ನು ತೆಗೆದುಕೊಂಡಿದ್ದರೂ ಕೂಡ ಅವಕ್ಕೆ ಮನ್ನಣೆಯನ್ನು ಕೊಡದೆ ಆಂಧ್ರದವರು ತಮ್ಮ ಇಷ್ಟ ಬಂದಂತೆ ಹೋಗುತ್ತಿದ್ದಾರೆ. ಅವರು ನಾಗಾರ್ಜುನಸಾಗರದ ಪ್ರಾಜೆಕ್ಟ್‌ನ್ನು ಕಟ್ಟುವಾಗ ತಾವು ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಂಡಿದ್ದೀರಾ?

ಎರಡನೆಯದು ತಾವು ತಮಿಳುನಾಡು ಚೀಫ್ ಮಿನಿಸ್ಟರನ್ನು ಭೇಟಿಯಾಗಿದ್ದೀರಿ ಎಂದು ತಿಳಿದು ಬಂದಿದೆ. ಆ ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯ ಮಂತ್ರಿಗಳಿಗೆ ತಮ್ಮ ನಿಲುವು ಏನಿದೆ ಎಂಬುದನ್ನು ಹೇಳಿರುವುದು, ಮತ್ತು ಈ ಬಗ್ಗೆ ನೆಗೋಷಿಯೇಷನ್ ಏನು ನಡೆಯುತ್ತಿದೆ ಎಂಬುದನ್ನು ತಮಿಳುನಾಡಿನವರು ಅಫಿಷಿಯರ್ ಲೆವೆಲ್‌ನಲ್ಲಿ ತಿಳಿಸಿದ್ದಾರೆಯೇ? ಮತ್ತು ಈಗಲಾದರೂ ಸಹ ತಮಿಳು ನಾಡಿನ ಆಫೀಸಿನವರಿಗೆ ನಿಮ್ಮ ನಿಲುವೆಯ ಬಗ್ಗೆ ಸ್ಪಷ್ಟವಾಗಿ ನಾವು ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದೀರಾ? ಅಥವಾ ಆಗಲೀ ನೋಡೋಣ, ಯೋಚನೆ ಮಾಡೋಣ, ನೆಗೋಷಿಯೇಷನ್ ಮಾಡೋಣ ಎಂದು ಅವರಿಗೆ ಹೇಳಿದ್ದೀರಾ?

ಮೂರನೆಯದು ಈ ಸರ್ಕಾರದ ಕಾಲವಿಳಂಬ ನೀತಿಯಿಂದ ಕಾವೇರಿ ನದಿಯ ನೀರಿನ ಹಂಚಿಕೆಯ ಬಗ್ಗೆ ಒಬ್ಬರು ಹೇಳಿದ್ದನ್ನು ಮತ್ತೊಬ್ಬರು ಒಪ್ಪದೆ ಈ ರೀತಿ ಬಹಳ ಜಿಜ್ಞಾಸೆ ಬಂದು ಈ ತರಹ ಪರಿಸ್ಥಿತಿ ಮೈಸೂರು ರಾಜ್ಯಕ್ಕೆ ಬಂದಿದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ? ಮತ್ತು ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ ಹಾಗೆ ತಾವು ಸ್ಪಷ್ಟವಾದ ಭರವಸೆಯನ್ನು ಕೊಡುತ್ತೀರಾ?

5-00 P.M.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ನಾವು ಮುದ್ರಾಸಿಗೆ ಇಷ್ಟು ಕ್ಯುಸೆಕ್ಸ್ ನೀರನ್ನು ಬಿಡ ಬೇಕೆಂದು ಅಗ್ರಿಮೆಂಟ್ ಇದೆ. ಆದರೆ ಇವತ್ತು ಎಷ್ಟು ಕ್ಯುಸೆಕ್ಸ್ ನೀರು ಬಿಡಬೇಕಾಗಿತ್ತೋ, ಅದಕ್ಕಿಂತ ಹೆಚ್ಚು ತೆಗೆದುಕೊಂಡು, ಮೇಲೆ ಭವಾನಿಗೆ ಎರಡು ಮೂರೂ ಅಣೆಕಟ್ಟನ್ನು ಕಟ್ಟಿದ್ದಾರೆ. ಇದಕ್ಕೆ ನೀವು ಪ್ರೊಟೆಸ್ಟ್ ಮಾಡಿದ್ದೀರಾ? ಮತ್ತು ಹೀಗೆ ಮಾಡಿದ್ದು, ಅವರ ತಪ್ಪಲ್ಲವೇ?

ಶ್ರೀ ಎಸ್. ಎಸ್. ಅರಕೇರಿ.—ನಾಗಾರ್ಜುನಸಾಗರ ಕಟ್ಟುವಾಗ ಮೈಸೂರು ಸರ್ಕಾರ ಕೇಂದ್ರ ಸರ್ಕಾರದ ಮುಖಾಂತರ ಪ್ರೊಟೆಸ್ಟ್ ಮಾಡಿದರೂ ಕೂಡ ಟ್ರಿಬ್ಯೂನಲಿಗೆ ಹಾಕಿದರೂ ಕೂಡ, ಅವರು ಯಾವುದೇ ರೀತಿಯ ಬಂದ್ ಮಾಡದೆ, ಪೂರ್ತಿಯಾಗಿ ಮಾಡಿದರು. ಅದು ಕಂಟೆಮ್ಪ್ಟ್ ಆಫ್ ಕೋರ್ಟ್ ಆಗಲಿಲ್ಲ. ಅವೇ ರೀತಿ ಈಗ ಕೇಂದ್ರದವರು ನಮಗೆ ನೋಟಿನೆ ಕೊಟ್ಟಿದ್ದಾರೆ. ಅದನ್ನು ಕೂಡ ಇಗ್ನೋರ್ ಮಾಡಿ ನಮ್ಮ ಕೆಲಸ ಮುಂದುವರಿಸುವುದು ಒಳ್ಳೆಯದು. ಮತ್ತು ಇದನ್ನು ಮುಂದೆ ಟ್ರಿಬ್ಯೂನಲಿಗೆ ಹಾಕಿದರೂ ಕೂಡ ಕಂಟೆಮ್ಪ್ಟ್ ಆಫ್ ಕೋರ್ಟ್ ಆಗುವುದಿಲ್ಲ ಆದ್ದರಿಂದ ಕೇಂದ್ರಸರ್ಕಾರದವರ ಆದೇಶವನ್ನು ಇಗ್ನೋರ್ ಮಾಡುವುದು ಉತ್ತಮ ಮತ್ತು ನಮ್ಮ ಯೋಜನೆಗಳನ್ನು ಹೆಚ್ಚು ಹೆಚ್ಚು ಉತ್ತಮವಾಗಿ ಮುಂದುವರಿಸುವುದು ಒಳ್ಳೆಯದು ಎಂದು ನನ್ನ ನಲಹೆ.

ಶ್ರೀ ಕೆ. ಪ್ರಭಾಕರ.—ಮೈಸೂರು ಸರ್ಕಾರಕ್ಕೂ ಕೇಂದ್ರಸರ್ಕಾರಕ್ಕೂ ಯಾವ ತರದ ಭಿನ್ನಾಭಿಪ್ರಾಯವಿಲ್ಲವೆಂದು ಮೊನ್ನೆ ತಾನೇ ಮುಖ್ಯಮಂತ್ರಿಯವರು ಹೇಳಿದರು. ನನಗಾದರೂ ಅನಿಸುತ್ತದೆ ಬಜೆಟಿನಲ್ಲಿ ಒಂದು ಕಡೆ 20 ಕೋಟಿ ರೂಪಾಯಿ ಇಷ್ಟು ಒಂದು ಲ್ಯಾಂಡ್ ಸ್ಲೈಡ್ ಇದ್ದ ಹಾಗೆ ಇದೆ. ಇನ್ನೊಂದು ಕಡೆ ಬೋರ್ಡರ್ ಸಮಸ್ಯೆ ಬೆಳೆಯುತ್ತಾ ಇದೆ. ಇದರಿಂದ ನನಗೂ ಕೇಂದ್ರಕ್ಕೂ ಏನು ಬಾಂಧವ್ಯವಿದೆ ಎನ್ನುವ ಮಾತು ಬರುತ್ತದೆ. ಇದರಿಂದ ದೇಶಕ್ಕೆ ಬಹಳ ಅನ್ಯಾಯ ವಾಗುತ್ತದೆ. ಇದರ ಬಗ್ಗೆ ಖಚಿತವಾಗಿ ಹೇಳಬೇಕು. ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡಬೇಕು. ಇಂಥ ವಿಚಿತ್ರ ಪರಿಸ್ಥಿತಿ ಬಂದಿರುವುದರಿಂದ ಇದನ್ನು ಬಗೆಹರಿಸುವುದು ಹೇಗೆ ಎಂಬ ಶಂಕೆ ಬರುತ್ತದೆ. ಇದಕ್ಕೆ ಏನು ಹೇಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾವೇರಿ ನದಿಯ ಬಗ್ಗೆ 1924ರ ಅಗ್ರಿಮೆಂಟ್ ಇದ್ದ ಹಾಗೆ ನಮ್ಮ ರಾಜ್ಯದ ಇತರ ಯಾವುದೇ ನದಿಗಳ ಬಗ್ಗೆ ಅಂಥ ಕರಾರು ಇದೆಯೇ ಹೇಗೆ? ಕರಾರು ಇದ್ದರೆ, ಆ ಕಾಲಮುಗಳಲ್ಲಿ ಕೇಂದ್ರಸರ್ಕಾರಕ್ಕೆ ಆದೇಶ ಕೊಡುವ ಅಧಿಕಾರ ಇದೆಯೇ? ಈ ಬಗ್ಗೆ ಖಚಿತವಾಗಿ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೀರಾ?

SRI VEERENDRA PATIL.—Sir, several hon. Members have sought clarifications. There are clarifications sought with regard to technical details, with regard to policies, with regard to the strategy to be adopted and also with regard to the future course of action. I do not know how far it will be possible for me to give clarifications which are going to satisfy the hon. Members who have sought them.

At the outset, I would like to make it clear that the dispute between Mysore and Tamil Nadu with regard to this Cauvery, in my humble opinion, is reaching a crucial stage.

So far as this Cauvery issue is concerned and similar other issues like the Krishna-Godavari, and the border issues, from the very beginning I have been considering these issues as State issues, and not issues which are the sole concern of the Government or of the party which is ruling. So, at every stage I have taken the Opposition leaders into confidence. I have apprised them of the position ; and also I have sought their guidance and help in this matter.

To illustrate this, immediately I got a letter, so to say a reminder from the Government of India day-before-yesterday—I think in the evening, I thought that I must consult the Opposition leaders. So I invited all the Opposition leaders. I had a discussion yesterday. Yesterday we had a very useful discussion. We discussed something and here I do not think it is wise on my part to disclose or to go into details of the discussions that I had with the leaders of the Opposition because I think it is not in the interest of the Mysore State to disclose the details of the discussions we had yesterday.

So far as the demand for a debate on the statement that I have made just how is concerned, I can only submit to the House and also to you that I do not wish to stand in the way if the House so desires to have a discussion or debate on this. But I have felt from the very beginning that the less we talk in this House about this Cauvery dispute, the better it is for the State and for all of us. I have been maintaining that because the proceedings are there. On several occasions I have stated that instead of discussing here openly in this House, we can have *in camera* discussions; and I had arranged *in camera* discussions because so many things we cannot discuss here openly. Hon. Members are aware that whatever we discuss here, they are public property; it is reported in the Press; they are reported in the proceedings. And I feel whatever we discuss here, in all probability it may be used against us. So, that is why I am terribly afraid of discussing this matter openly in this House. Several times I have dissuaded and persuaded successfully my friends on the Opposition side to agree for a discussion outside this House *in camera*. We had *in camera* meetings also. I am saying this because the more we discuss, I think the more harm will be there to our interest because when we start a discussion, we do not know how we are going to discuss; how discussions develop it is very

(SRI VEERENDRA PATIL)

difficult for anybody to say at this stage. I say that the debate on this matter will do irreparable damage to Mysore State. I think I can only say this much and not more.

In spite of this if the House wants a debate or discussion, I am not here to shut a discussion or debate in this House. When I say this, I am saying with a full sense of responsibility because in the beginning itself I said that this talk or issue or the controversy has reached a crucial stage and to me it appears that this matter may go to tribunal at any time as a demand for this has been made by Tamil Nadu. A tribunal may become inevitable. How it is going and who is going to tribunal, I am not here to discuss. I feel that this matter may go to a tribunal and when this matter goes to the tribual as Chief Minister whatever I say will be a document which is going to be used against us in the tribunal. That is why I am afraid of making a statement or giving details.

Now hon. members asked what is the water left in Kabini and whether it is enough : is it possible to give and all that ? As Chief Minister supposing I say, yes, I have 10 TMCft I can give 5 TMCft. Supposing if I make such a statement, how that statement is going to be made use of against Mysore when the matter comes up before the tribunal, it is important to consider these things. But it is for the entire House to consider. Therefore, I feel it is not wise to enter into details, technical or otheswise, on this subject at this stage. So, I do not want to say anything about these things.

The hon. member Sri H. Siddaveerappa stated that as soon a letter came I must immediately leave for Delhi. I do not know what purpose is going to be served by my going to Delhi. If I go to Delhi, then they will say whatever they have said in writing is all that they wanted to say and that I should give my considered opinion. If I have to ask or request the Government of India to have another meeting of the Chief Ministers, then whatever I want, I can do sitting here by writing a letter. I can say that this is an issue which we have to discuss with the Chief Ministers; I am prepared to come to Delhi and you can arrange for another meeting with the Chief Ministers of Madras and Kerala. I can do all that by sitting here and by sending a communication from here. He made a charge against the Government saying that this Government is proceeding with all the works in Krishna Basin and stopped works in Cauvery Basin.

SRI H. SIDDAVEERAPPA.—I said that it is the feeling.

SRI VEERENDRA PATIL.—That feeling has been voiced by the hon. member Sri Siddaveerappa. That is what I said. He stated that; otherwise I would not have mentioned that point. So far as this Government is concerned I have made clear several times that whether it is Krishna Basin or Cauvery Basin or any other basin, those basins are in our State; they are equally important to us and to protect

the interest of the people of those basins, it is the first and foremost duty of the Government ; and we have not at any time considered or viewed that Krishna basin as more important and Cauvery basin is not important and that is why we can defer the projects in Cauvery basin. As Government we feel that it is our utmost duty to safeguard the interest of people of all the basins. We have been functioning with that object in view. Sri Channabasappa wanted to know under what provision of the Constitution the Government of India have asked us to stop the work. That is a question that has to be put to the Government of India and not to me. What do I know under what provision they are asking ?

Sri H. SIDDAVEERAPPA.—Have you at least asked them in your letter ?

Sri VEERENDRA PATIL.—That is why I made it clear in my statement that I only said that I have received the letter. I have not sent any reply. I have only acknowledged the letter and have asked for three or four weeks' time to send a reply. When I send a reply, what reply I am to send and all that, are matters to be taken into consideration.

Sri H. M. CHANNABASAPPA.—I asked the Chief Minister to let me know at least so far as the Government of Mysore knows, is there any provision under the Constitution or law in force in this country wherein the Central Government can give such direction to the State Government ?

Sri VEERENDRA PATIL.—It is difficult for me to say whether the letter I have received from the Government of India is a directive, whether it is mandatory or whether it is advisory. That is why I said that these matters are being examined and yesterday I have discussed with them. I took them into confidence and said that these matters will be examined, a reply to this letter will be prepared and I have gone a step further and said that before sending it I will again invite them and send a reply. I do not know what more I can do. At every step I am taking them into confidence. I once again make an appeal to them that it is better if we desist from discussing it here in this House. As I said earlier we do not know what is going to happen. After four weeks, after I send a reply what attitude the Government of India is going to take, what decision they are going to take, it is too early for me to say anything. Till we prepared and send a reply, I feel, there is no point in discussing here. If we want to discuss, that is going to do irreparable damage. That is why I once again appeal to the members that we should not at this stage venture to discuss this crucial and delicate matter in this House. If we want to discuss, we can discuss outside at any time.

One point I wish to say. Several members wanted to know from me, now that a letter has come from the Government of India and the Government of India is expecting a reply from us before taking further

(SRI VEERENDRA PATIL)

action, what action they are going to take. I cannot say what is going to happen. In the meantime they wanted to know whether in accordance with the wishes or suggestions made by the Government of India we are going to stop all the works in progress. I would like to make clear, that we are not thinking of stopping any of our projects. We will continue our projects. in the meanwhile, whatever reply I have to send, I am getting it examined. We do not know whether my reply may form a very important document when it goes before the tribunal. That is why I cannot say that today I have received a letter and tomorrow I am going to send a reply. This is an important matter and that is why I have requested the Government of India to give adequate time to send a reply to them. Therefore I do not propose to stop any of the works in Cauvery basin The works will proceed.

Sri H. SIDDAVEERAPPA.—Has the Chief Minister made up his mind not to make a personal visit to Delhi but to have everything done by communications ?

Sri VEERENDRA PATIL.—I am sorry that every time this question is put. We are a federal type of Government and many times we have to go to Delhi. I cannot say that so long I am here as Chief Minister I do not make a trip to Delhi, and that I will do everything by correspondence. That is not my function. I only said that at this stage there is no point in going to Delhi. I am going to Delhi everytime—sometimes twice or thrice in a month. In this matter if it is necessary for me to make a trip to Delhi, I am prepared to go to Delhi and have another discussion with the Union Minister and others. I never avoid discussions. It is not at all my intention. I have to go to Delhi whether the Hon. Members want it not. As Chief Minister I have got to go to Delhi and I have gone and in future also I am prepared to go.

Sri H. SIDDAVEERAPPA.—Our Constitution is federal in character. I am requesting the Chief Minister to read the various provisions of the Constitution, particularly Part 11. The very theme of our Constitution is unitary in practice although it is federal in character.

Sri VEERENDRA PATIL.—I never disputed it.

Sri M. S. KRISHNAN.—The Hon. Chief Minister's going to Delhi is to be decided by him. It is not wise to say that he should go to Delhi. The matter has come to a crucial stage. This is a matter about which the entire State is interested. Secondly this is a matter where letter writing may not cut much ice. Letters may be written. Lobbying and discussion with the Centre may be necessary and the weight of the Chief Minister may do something good to the State. It looks to me what is being discussed here about the border issue as well as water dispute might have impressed the Chief Minister to go to Delhi with self-confidence and that he would impress the Centre in regard to these

matters. To whatever party we belong and whatever to the political reasons, we must all look into these problems in the interest of the State. This water problem has reached a crucial stage.

Sri VEERENDRA PATIL.—I do not know why some Hon. members are repeatedly asking me about my going to Delhi. Whenever it is necessary, I am prepared to go to Delhi. As State Government, I have to depend upon the Government of India on so many matters. I cannot avoid going to Delhi if it is necessary. These are matters which require serious consideration.

Sri AZEEZ SAIT.—When the letter is received day before yesterday, the Chief Minister and another delegation of members may go to Delhi for the purpose of lobbying with the Central Government.

Budget Estimates for 1970–71.

(General Discussion)

(Debate continued.)

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್‌ಮಾನ್ಯ ಸಭಾಧ್ಯಕ್ಷರೇ, ಇಂದಿನ ದಿವಸ ನಮ್ಮ ಅರ್ಥಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಕೊಟ್ಟಿರತಕ್ಕ ಆಯವ್ಯಯ ಪಟ್ಟಿಯನ್ನು ನಾನು ಎರೋಧಿಸುತ್ತಾ, ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿರುವ ರೀತಿಯಲ್ಲಿ ಈ ಆಯವ್ಯಯ ಪಟ್ಟಿಯಲ್ಲಿ ಒದಗಿಸಿರುವ ಹಣವನ್ನು ಯಾವ ಯಾವ ರೀತಿಯಲ್ಲಿ ಈ ವರ್ಷಗಳಲ್ಲಿ ಖರ್ಚು ಮಾಡಬೇಕು ಎನ್ನುವುದನ್ನು ನಮಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿದ್ದಾರೆ. ಪೊಟ್ಟವೊದಲನೆಯದಾಗಿ ಈ ಬಜೆಟಿನಲ್ಲಿ ಹೆಚ್ಚು ಹಣವನ್ನು ಮರಾಮತ್ತು ಇರಾಖೆ ಮೂಲಕ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಕೊಟ್ಟಿದ್ದಾರೆ. ಪಿ.ಡಬ್ಲ್ಯೂ.ಡಿ. ಇರಾಖೆಯಲ್ಲಿ ಕೆಲವೊಂದು ಅಂದಾಜುಗಳನ್ನು ಬಿಟ್ಟರೆ, ರಾಜಕೀಯ ಪ್ರಾಜೆಕ್ಟುಗಳು ಹೆಚ್ಚಿಗೆ ಕಂಡುಬರುತ್ತವೆ. ಇವುಗಳಿಗೆ ಕೊಟ್ಟ ಹಣ ಏನಿದೆಯೋ ಅದು ನಿಜವಾಗಿಯೂ ಕೂಡ ದುರ್ವ್ಯಯವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು ರಾಮಕೃಷ್ಣ ಹೆಗಡೆಯವರು ಚಿಕ್ಕಮಗಳೂರು ಜಿಲ್ಲೆಗೆ ಬಂದಾಗ ನೋಡಿದ್ದಾರೆ. ಅಲ್ಲಿ ಕಟ್ಟುತ್ತಿರುವ ದಾನರಹಳ್ಳಿ ಕೆರೆ ರಾಜಕೀಯ ಪ್ರಾಜೆಕ್ಟು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೂರು ಲಕ್ಷ ರೂಪಾಯಿಗಳಲ್ಲಿ ಆ ಕೆರೆ ನಿರ್ಮಾಣ ಮಾಡಬೇಕು ಎಂದು ಇಂಜಿನೀಯರಿಂಗ್ ಇರಾಖೆಯವರು ತಯಾರು ಮಾಡಿದ ಅಂದಾಜು, ಆ ಕೆರೆ ರಾಜಕೀಯ ಕಂಟ್ರಾಕ್ಟುಗಳಿಗೆ ಅಂದರೆ ಶ್ರೀ ಸಿದ್ದವೀರಪ್ಪನವರು ಹೇಳಿದಂತೆ ಕರ್ಣಾಟಕ ಟ್ರೇಡರ್ಸ್ ಎನ್ನತಕ್ಕವರಿಗೆ ಕೊಟ್ಟಿದ್ದರಿಂದ ಅವರು ಅದನ್ನು ಅವ್ಯವಸ್ಥೆ ಮಾಡಿ ಪೂರ್ಣ ಮುಗಿಸಬೇಕಾದರೆ ಹದಿಮೂರುವರೇ ಲಕ್ಷ ರೂಪಾಯಿಗಳು ಆಯಿತು. ಅದು ನೀರು ನಿಲ್ಲದ ಕೆರೆ ಎಂದು ಹೇಳಿದ್ದರೆ ತಪ್ಪಾಗಲಾರದು. ಒಂದು ತೊಟ್ಟು ನೀರೂ ಆ ಕೆರೆಯಲ್ಲಿ ಇಲ್ಲ. ಮುಂದೆ ಅಲ್ಲಿ ನೀರು ಬರುವ ಭರವಸೆಯೂ ಇಲ್ಲ. ಹದಿಮೂರೂವರೇ ಲಕ್ಷ ರೂಪಾಯಿ ಕರ್ಣಾಟಕ ಟ್ರೇಡರ್ಸ್‌ಗೆ ಕೊಟ್ಟು ರಾಜಕೀಯ ಕೆರೆಯನ್ನು ಕಟ್ಟಿದ್ದಾರೆ. ಇದರಿಂದ ಯಾವ ರೈತನಿಗೆ ಉಪಯೋಗವಾಗುತ್ತದೆ ಎಂದು ಕೇಳುತ್ತೇನೆ. ಹದಿಮೂರೂವರೆ ಲಕ್ಷ ಖರ್ಚುಮಾಡಿ ಇಲ್ಲಿ ನೀರು ನಿಲ್ಲುತ್ತದೆ ರೈತನಿಗೆ ಉಪಕಾರವಾಗುತ್ತದೆ ಎಂದು ಹೇಳಿದ ಇಂಜಿನೀಯರ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ. ಈಗಲೂ ಕೂಡ ಕೆರೆ ವಿಚಾರದಲ್ಲಿ ಸಂಬಂಧಪಟ್ಟ ಇಂಜಿನೀಯರುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ಕೆರೆಗೆ ಶಾಶ್ವತವಾದ ನೀರನ್ನು ಒದಗಿಸಬೇಕಾದರೆ ಚಿಕ್ಕಮಗಳೂರು ಜಿಲ್ಲೆಯಲ್ಲ ಹೊನ್ನಮ್ಮನ ಹಳ್ಳ ಎನ್ನುವ ಜೀವ ನದಿ ಇದೆ, ಇಲ್ಲಿಂದ ನೀರುತರುವ ಪ್ರಾಜೆಕ್ಟನ್ನು ಇಂಜಿನೀಯರಿಂಗ್ ಇರಾಖೆಯವರು ತಯಾರು ಮಾಡಿ ಅದನ್ನು ಕಾರ್ಯಗತ ಮಾಡಿದರೆ, ಈ ಹದಿಮೂರೂವರೆಲಕ್ಷ ರೂಪಾಯಿಗಳನ್ನು ಖರ್ಚುಮಾಡಿರತಕ್ಕದ್ದು ಸಾರ್ಥಕವಾಗುತ್ತದೆ. ಮತ್ತೆ ಹಾಲಿ ವ್ಯಥಾ ಹರಿದು ಹೋಗುತ್ತಿರುವ ಹೊನ್ನಮ್ಮನ ಹಳ್ಳದ